AUGUST 26, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕೇಂದ್ರ ಶಾಲಾ ಮತ್ತು ಶಿಕ್ಷಣ ಸಾಕ್ಷರತಾ ಇಲಾಖೆ, ಪ್ರಸಕ್ತ 2025ನೇ ಸಾಲಿನ, ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಪ್ರಕಟಿಸಿದ್ದು, ರಾಜ್ಯದಿಂದ, ಮೈಸೂರು ಜಿಲ್ಲೆ, ಹಿನಕಲ್ ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಜ್ಞಾನ ಶಿಕ್ಷಕ, ಕೆ.ಎಸ್. ಮಧುಸೂಧನ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 50 ಸಾವಿರ ರೂಪಾಯಿ ನಗದು, ಪ್ರಮಾಣ ಪತ್ರ ಹಾಗೂ ಬೆಳ್ಳಿ ಪದಕ ಒಳಗೊಂಡಿದೆ. ರಾಷ್ಟ್ರೀಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ, ವಿವಿಧ ರಾಜ್ಯಗಳಿಂದ 48 ಜನ ಶಿಕ್ಷಕರು ಆಯ್ಕೆಯಾಗಿದ್ದಾರೆ. ಶಿಕ್ಷಕರ ದಿನಾಚರಣೆ, ಆದರ್ಶ ಶಿಕ್ಷಕ, ಸರ್ವೇಪಳ್ಳಿ ರಾಧಾಕೃಷ್ಣನ್ ಅವರ ಜನ್ಮದಿನವಾದ ಸೆಪ್ಟೆಂಬರ್ 5 ರಂದು, ಹೊಸ ದಿಲ್ಲಿಯಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಪ್ರಶಸ್ತಿ ಪ್ರದಾನ ಮಾಡಿ, ಅತ್ಯುತ್ತಮ ಶಿಕ್ಷಕರನ್ನು ಸನ್ಮಾನಿಸಲಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ, ಅತ್ಯುತ್ತಮ ಶಿಕ್ಷಕ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾದ, ಮೈಸೂರಿನ ಕೆ.ಎಸ್. ಮಧುಸೂಧನ.

<><><>

ಕೆ.ಎಸ್. ಮಧುಸೂಧನ ಧ್ವನಿ 36 ಸೆಕೆಂದುಗಳು

<><><>

ಬದುಕು, ಅನ್ನ, ಶಾಂತಿ ಮತ್ತು ನೆಮ್ಮದಿಗೆ ಪೂರಕವಾದ, ಕನ್ನಡ ಪಠ್ಯ ಪುಸ್ತಕಗಳು ರೂಪುಗೊಳ್ಳಬೇಕು ಎಂದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಹೇಳಿದ್ದಾರೆ. ಬೀದರ ಕರ್ನಾಟಕ ಸಾಹಿತ್ಯ ಸಂಘ ಆಯೋಜಿಸಿದ್ದ, 'ಕನ್ನಡ ಶಾಲೆಗಳ ಸ್ಥಿತಿ–ಗತಿ; ಪರಿಹಾರೋಪಾಯ', ಸಂವಾದ ಗೋಷ್ಠಿ ಉದ್ಘಾಟಿಸಿ, ಮಾತನಾಡಿದರು._ಮಾತೃ ಭಾಷೆ ಕನ್ನಡದಲ್ಲಿ, ಗಣನೀಯ ಸಂಖ್ಯೆಯ ವಿದ್ಯಾರ್ಥಿಗಳು, ಈಗಲೂ ಅನುತ್ತೀರ್ಣರಾಗುತ್ತಿದ್ದಾರೆ. ಸರ್ಕಾರ, ಕನ್ನಡ ಶಾಲೆಗಳಿಗೆ, 55 ಸಾವಿರ ಶಿಕ್ಷಕರನ್ನು ನೇಮಿಸಬೇಕಿದೆ ಎಂದರು.

<><><>

ರಾಜ್ಯಾದ್ಯಂತ, ವಿಮುಕ್ತ ದೇವದಾಸಿಯರ ಸಮೀಕ್ಷೆ ಕಾರ್ಯ ಆರಂಭವಾಗಿದೆ. ಈ ಪಿಡುಗನ್ನು ಸಂಪೂರ್ಣವಾಗಿ ತೊಲಗಿಸಿ, ಪುನರ್ವಸತಿ ಕಲ್ಪಿಸಲು, ವಿಶೇ ಾ ಅನುದಾನ ಒದಗಿಸಿ, ಯೋಜನೆ ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಭರವಸೆ ನೀಡಿದ್ದಾರೆ. ಬೆಂಗಳೂರಿನ ವಿಧಾನಸೌಧದಲ್ಲಿ ಪರಿಶಿ ್ಟ ಜಾತಿ, ಪರಿಶಿಷ್ಟ ಪಂಗಡಗಳ, ಜಾಗೃತಿ ಮತ್ತು ಉಸ್ತುವಾರಿ ರಾಜ್ಯ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯಲ್ಲಿ, ದಲಿತ ಸಮುದಾಯಕ್ಕೆ ಸೂಕ್ತ ನ್ಯಾಯ ಒದಗಿಸಲು ತಾವು ಬದ್ಧ ಎಂದರು.

<><><>

ನಾಡಿನಾದ್ಯಂತ ಸ್ವರ್ಣ ಗೌರಿ ವ್ರತ ಹಾಗೂ ಗಣೇಶ ಪ್ರತಿಷ್ಠಾಪನೆಗೆ ಭರದ ಸಿದ್ಧತೆಗಳು ನಡೆದಿವೆ. ಇಂದು ಸ್ವರ್ಣ ಗೌರಿ ಪೂಜೆ ನಡೆಯಲಿದ್ದು, ನಾಳೆ ಗಣೇಶ ವಿಗ್ರಹಗಳು ಮನೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ, ಪ್ರಾಣ ಪ್ರತಿಷ್ಠಾಪನೆ ಗೊಳ್ಳಲಿವೆ. ಸ್ವರ್ಣ ಗೌರಿ ವ್ರತ, ಪಾರ್ವತಿ ದೇವಿಯನ್ನು ಪೂಜಿಸುವ ಹಬ್ಬವಾಗಿದೆ. ಆದಿ ಶಕ್ತಿ, ಮಹಾಮಾಯೆಯ ಅವತಾರವಾದ, ಗೌರಿಯಾಗಿ ಶ್ರದ್ಧಾ, ಭಕ್ತಿಯಿಂದ ಇಂದು ಪೂಜಿಸಲಾಗುತ್ತಿದೆ.

<><><>

ಗೌರಿ–ಗಣೇಶ ಹಬ್ಬದ ಹಿನ್ನೆಲೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ, ಅನೇಕ ಗಣ್ಯರು, ನಾಡಿನ ಜನತೆಗೆ ಶುಭಾಶಯ ಕೋರಿದ್ದಾರೆ. 'ಮಣ್ಣಿನಿಂದ ಮಾಡಿದ ಪರಿಸರ ಸ್ನೇಹಿ ಗಣೇಶ ವಿಗ್ರಹಗಳನ್ನು ಮಾತ್ರ ಪೂಜಿಸುವಂತೆ, ಹಸಿರು ಪಟಾಕಿಗಳನ್ನು ಮಾತ್ರ ಬಳಸಿ, ಹಬ್ಬವನ್ನು ಸಂಭ್ರಮ–ಸಡಗರದಿಂದ, ಪರಿಸರ ಕಾಳಜಿಯೊಂದಿಗೆ ಆಚರಿಸೋಣ' ಎಂದು, ಕರೆ ನೀಡಿದ್ದಾರೆ.

<><><>

ಧಾರವಾಡ–ಹುಬ್ಬಳ್ಳಿ, ವಿಜಯಪುರ, ದಕ್ಷಿಣಕನ್ನಡ, ಕಲಬುರಗಿ ಹಾಗೂ ಬಳ್ಳಾರಿ ಸೇರಿದಂತೆ, ವಿವಿಧ ಜಿಲ್ಲೆಗಳಲ್ಲಿ ಮುಂಜಾಗ್ರತಾ ಕ್ರಮವಾಗಿ, ವ್ಯಾಪಕ ಬಿಗಿ ಪೊಲೀಸ್ ಬಂದೋಬಸ್ತ್ ಹಾಗೂ ವಿವಿಧ ಧಾರ್ಮಿಕ ಮುಖಂಡರೊಂದಿಗೆ, ಸೌಹಾರ್ದ ಸಭೆಗಳನ್ನು ಜಿಲ್ಲಾಡಳಿತ ನಡೆಸಿದೆ.

<><><>

ಗೌರಿ–ಗಣೇಶ ಹಬ್ಬದ ಹಿನ್ನೆಲೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಇದೇ 31ರ ವರೆಗೆ, ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ನೆರೆ ರಾಜ್ಯಗಳಿಗೆ, ಒಂದು ಸಾವಿರದ 500ಕ್ಕೂ ಹೆಚ್ಚು ಬಸ್‌ಗಳನ್ನು ಓಡಿಸಿ, ಹಬ್ಬದಲ್ಲಿ ಎಲ್ಲರೂ ಪಾಲ್ಗೊಳ್ಳಲು ಅನುಕೂಲ ಕಲ್ಪಿಸಿದೆ. ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಸೆಟ್‌ಲೈಟ್ ನಿಲ್ದಾಣ, ಶಾಂತಿ ನಗರದಿಂದ ಬಸ್ ಸಂಪರ್ಕ ಕಲ್ಪಿಸಲಾಗಿದೆ. ಮುಂಬೈ, ಪುಣೆ, ಗೋವಾ ಮತ್ತು ಮಂಗಳೂರಿನಿಂದ, ನಾಳೆಯಿಂದ 31ರ ವರೆಗೆ ಹಿಂದಿರುಗುವ ಸೇವೆಯನ್ನು ಕಲ್ಪಿಸಲಾಗಿದೆ.

<><><>

ಬೆಂಗಳೂರು ದಕ್ಷಿಣ ಜಿಲ್ಲೆಯಾದ್ಯಂತ, ಪೊಲೀಸ್ ಕಾಯ್ದೆ–1963 ಕಲಂ 35, 36ರ ಅನ್ವಯ, ಜಿಲ್ಲಾಧಿಕಾರಿ ಯಶವಂತ ಗುರುಕರ, ಗಣೇಶೋತ್ಸವ ಹಬ್ಬದ ಆಚರಣೆ ಪೂರ್ಣಗೊಳ್ಳುವ ವರೆಗೆ, ವಯೋವೃದ್ಧರು, ಮಕ್ಕಳ ಹಿತದೃಷ್ಟಿಯಿಂದ, ಡಿಸ್ಕೋ ಜಾಕಿ ಧ್ವನಿ ವರ್ಧಕ ವ್ಯವಸ್ಥೆ – ಡಿ.ಜೆ. ಸಿಸ್ಟಂ ಬಳಕೆ ನಿ ೇಧಿಸಿ, ಆದೇಶಿಸಿದ್ದಾರೆ.

<><><>

ಕೊಪ್ಪಳ ತಾಲೂಕು, ಶ್ರೀ ಕ್ಷೇತ್ರ ಹುಲಿಗಿಯ, ತುಂಗಭದ್ರಾ ನದಿ ತೀರದಲ್ಲಿ, ಇಂದು ಸಂಜೆ 6.30ಕ್ಕೆ ತುಂಗಭದ್ರಾ ಆರತಿ ಉತ್ಸವ ನಡೆಯಲಿದೆ. ಕೊಪ್ಪಳ ಸಂಸದ ರಾಜಶೇಖರ ಹಿಟ್ನಾಳ ಮಾಹಿತಿ ನೀಡಿ, ವಾರಾಣಸಿಯ, ಕಾಶಿಯಲ್ಲಿ ಗಂಗಾ ಆರತಿ ಮಾದರಿಯಲ್ಲಿ, ತುಂಗಭದ್ರಾ ಆರತಿ ಮಹೋತ್ಸವ ಹಾಗೂ ಬಾಗಿನ ಅರ್ಪಣೆ ಜರುಗಲಿದೆ ಎಂದರು. ಹಿಂದು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮುಜರಾಯಿ ಖಾತೆ ಸಚಿವ ರಾಮಲಿಂಗಾರೆಡ್ಡಿ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ನದಿ ತಟದ ವೇದಿಕೆಯಲ್ಲಿ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

ಸ್ಥಳೀಯ ಸಾಂಪ್ರದಾಯಿಕ ಕರಕುಶಲ ವಸ್ತು ಉತ್ಪನ್ನಗಳನ್ನು ಉತ್ತೇಜಿಸಲು, 'ಆಕಾಂಕ್ಷ ಹಾತ್ ಕರ್ಗಾ' ಕಾರ್ಯಕ್ರಮದಡಿ, ರಾಯಚೂರಿನ ಟಿಪ್ಪು ಸುಲ್ತಾನ್ ಉದ್ಯಾನದಲ್ಲಿ, ಇದೇ 30ರ ವರೆಗೆ, ವಿಶೇಷ ಮಾರಾಟ ಮೇಳ, ಆಯೋಜಿತವಾಗಿದೆ. ಒಂದು ವಾರ ಕಾಲ ಆಯೋಜಿತ ಕರಕುಶಲ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ, ಅಪರ ಜಿಲ್ಲಾಧಿಕಾರಿಶಿವಾನಂದ ಭಜಂತ್ರಿ ಚಾಲನೆ ನೀಡಿದರು.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, ಉತ್ಸವ, ಕಾರ್ಯಕ್ರಮಗಳ ಹೆಸರಿನಲ್ಲಿ, ಲಕ್ಕಿ ಡ್ರಾ ಲಾಟರಿ ನಡೆಸುವುದನ್ನು, ನಿಷೇಧಿಸಿದ್ದಾಗಿ, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಲಾಟರಿ ಚಟುವಟಿಕೆ ನಡೆಯದಂತೆ ನಿಗಾ ವಹಿಸಲು, ವಿಚಕ್ಷಣಾ ದಳ ರಚಿಸಲಾಗಿದೆ. ಜಿಲ್ಲಾ ಪೊಲೀಸ್ ವರಿ ್ಠಾಧಿಕಾರಿ ನೇತೃತ್ವದಲ್ಲಿ, ತಂಡ ರಚನೆಯಾಗಿದೆ ಎಂದು, ಹೇಳಿದರು.

<><><>

ರಾಜ್ಯದ ವಿವಿಧೆಡೆ, ಮಳೆ ಇಂದಿನಿಂದ ಪುನಃಶ್ಚೇತನಗೊಳ್ಳುವ ಸಾಧ್ಯತೆಯಿದೆ. ಆಗಸ್ಟ್ 29ರ ವರೆಗೆ, ರಾಜ್ಯದ ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ, ಚದುರಿದಂತೆ ಸಾಧಾರಣ ಮಳೆಯಾಗುವ ನಿರೀಕ್ಷೆ ಇದೆ. ಆಗಸ್ಟ್ 30 ರಿಂದ ಮಳೆ ಕಡಿಮೆಯಾಗುವ ಸಾಧ್ಯತೆಯಿದೆ. ಸೆಪ್ಟೆಂಬರ್ 3ರ ವರೆಗೆ ಕರಾವಳಿ ಜಿಲ್ಲೆಗಳಲ್ಲಿ, ಸಾಧಾರಣ ಮಳೆ, ಉಳಿದ ಜಿಲ್ಲೆಗಳಲ್ಲಿ ಅಲ್ಲಲ್ಲಿ ಚದುರಿದಂತೆ ತುಂತುರು ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>